# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಮಾಹಿತಿ ಹಕ್ಕು ಕಾಯ್ದೆ – 2005 ಸೆಕ್ಷನ್ 4(1) (ಬಿ) ರ ಅನ್ವಯ ಪ್ರಕಟಿಸಿದ್ದು

1. ಆರೋಗ್ಯಾಧಿಕಾರಿ (ಪಶ್ಚಿಮ) ಕ್ಲಿನಿಕಲ್ ಕಛೇರಿಯ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರ

ಅ.√ ಕಛೇರಿಯ ಹೆಸರು :

ಆರೋಗ್ಯಾಧಿಕಾರಿ (ಪಶ್ಚಿಮ) ಕ್ಲಿನಿಕಲ್
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ದಾಸಪ್ಪ ಹೆರಿಗೆ ಆಸ್ಪತ್ರೆ ಆವರಣ 2ನೇ ಮಹಡಿ
ಎಸ್.ಜೆ.ಪಿ ರಸ್ತೆ ಬೆಂಗಳೂರು–560002
ದೂರವಾಣಿ ಸಂಖ್ಯೆ: 080– 22975656

ಆ. √ ರಚನೆ :



7

<u>ಕಾರ್ಯಗಳು ಮತ್ತು ಕರ್ತವ್ಯಗಳು:</u>

ಆರೋಗ್ಯ ವೈದ್ಯಕೀಯ ಇಲಾಖೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಒಂದು ಪ್ರಮುಖವಾದ ಇಲಾಖೆಯಾಗಿರುತ್ತದೆ. ಈ ಕಛೇರಿಯ ವ್ಯಾಪ್ತಿಯಲ್ಲಿ 2 ರೆಫರಲ್ ಆಸ್ಪತ್ರೆಗಳಿರುತ್ತವೆ.

1. ಶ್ರೀರಾಮಪುರ ರೆಫರಲ್ ಆಸ್ಪತ್ರೆ
2. ಹೊಸಹಳ್ಳಿ ರೆಫರಲ್ ಆಸ್ಪತ್ರೆ

ಮೊದಲನೇಯದಾಗಿ ಶ್ರೀರಾಮಪುರ ರೆಫರಲ್ ಆಸ್ಪತ್ರೆಯ ವ್ಯಾಪ್ತಿಯಲ್ಲಿನ ಹೆರಿಗೆ ಆಸ್ಪತ್ರೆಗಳ ವಿವರ ಇಂತಿದೆ 1. ಯಶವಂತಪುರ ಹೆರಿಗೆ ಆಸ್ಪತ್ರೆ 2. ಕಾಟನ್ ಪೇಟೆ ಹೆರಿಗೆ ಆಸ್ಪತ್ರೆ, 3. ಮನವರ್ತ ಪೇಟೆ ಹೆರಿಗೆ ಆಸ್ಪತ್ರೆ 4. ಗಂಗಾನಗರ ಹೆರಿಗೆ ಆಸ್ಪತ್ರೆ, 5. ಮುನಿರೆಡ್ಡಿ ಪಾಳ್ಯ ಹೆರಿಗೆ ಆಸ್ಪತ್ರೆ.

ಎರಡನೇಯದಾಗಿ ಹೊಸಹಳ್ಳಿ ರೆಫರಲ್ ಆಸ್ಪತ್ರೆಯ ವ್ಯಾಪ್ತಿಯಲ್ಲಿನ ಹೆರಿಗೆ ಆಸ್ಪತ್ರೆಗಳ ವಿವರ ಇಂತಿದೆ 1. ರಾಜಾಜಿ ನಗರ ಹೆರಿಗೆ ಆಸ್ಪತ್ರೆ 2. ನಂದಿನಿ ಲೇಔಟ್ ಹೆರಿಗೆ ಆಸ್ಪತ್ರೆ 3. ಮೂಡಲ ಪಾಳ್ಯ ಹೆರಿಗೆ ಆಸ್ಪತ್ರೆ 4. ಮಾಗಡಿ ರಸ್ತೆ ಹೆರಿಗೆ ಆಸ್ಪತ್ರೆ..

ಮಾನ್ಯ ಆಯುಕ್ತರು ರವರ ಆದೇಶದ ಸಂಖ್ಯೆ ಬಿ12(1)ಪಿಆರ್/394/2010-11 ದಿನಾಂಕ: 05-07-2010 ರ ಆದೇಶದ ರೀತ್ಯಾ

1. "ಸಿ" ಮತ್ತು "ಡಿ" ವೃಂದದ ನೌಕರರುಗಳಿಗೆ 3 ರಿಂದ 5 ವರ್ಷಗಳವರೆಗೆ ಹಾಗೂ 5 ವರ್ಷಗಳಿಗೂ ಮೇಲ್ಪಟ್ಟು ಅವಧಿಗೆ ತಡೆ ಹಿಡಿಯಲಾದ ವಾರ್ಷಿಕ ವೇತನ ಬಡ್ತಿಗಳನ್ನು ಕಾಲ ವಿಳಂಬ ಮನ್ನಾ ಮಾಡಿ ಮಂಜೂರು ಮಾಡುವ ಅಧಿಕಾರ
2. "ಸಿ" ಮತ್ತು "ಡಿ" ವೃಂದದ ನೌಕರರುಗಳಿಗೆ ಸ್ಥಗಿತ ವೇತನ ಬಡ್ತಿ ಮಂಜೂರು ಮಾಡುವ ಅಧಿಕಾರ
3. "ಸಿ" ಮತ್ತು "ಡಿ" ವೃಂದದ ನೌಕರರುಗಳಿಗೆ 30 ದಿನಗಳ ಗಳಿಕೆ / ಪರಿವರ್ತಿತ ರಜೆಯನ್ನು ಮಂಜೂರು ಮಾಡುವ ಅಧಿಕಾರ
4. "ಸಿ" ಮತ್ತು "ಡಿ" ವೃಂದದ ನೌಕರರುಗಳಿಗೆ 30 ದಿನಗಳ ಗಳಿಕೆ ರಜೆ ನಗದೀಕರಿಸಲು ಮಂಜೂರಾತಿ ನೀಡುವ ಅಧಿಕಾರ
5. "ಬಿ", "ಸಿ" ಮತ್ತು "ಡಿ" ವೃಂದದ ಅಧಿಕಾರಿ / ನೌಕರರುಗಳಿಗೆ 10 ವರ್ಷಗಳ ಕಾಲಮಿತಿ ವೇತನ ಬಡ್ತಿ, 15 ವರ್ಷಗಳ ವಿಶೇಷ ಕಾಲಮಿತಿ ವೇತನ ಶ್ರೇಣಿ ಮತ್ತು 20 ವರ್ಷಗಳ ಹೆಚ್ಚುವರಿ ವೇತನ ಬಡ್ತಿಗಳನ್ನು ಮಂಜೂರು ಮಾಡುವ ಅಧಿಕಾರ
6. ವಲಯ ವ್ಯಾಪ್ತಿಯಲ್ಲಿನ ರೆಫರಲ್ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆಂಬುಲೇನ್ಸ್ ವಾಹನಗಳ ದುರಸ್ಥಿಗಳಿಗೆ ಸಂಬಂಧಿಸಿದಂತೆ ರೂ. 25000/- ಗಳ ಆಡಳಿತಾತ್ಮಕ ಮಂಜೂರಾತಿ ನೀಡುವ ಅಧಿಕಾರ
7. ಎ.ಬಿ.ಸಿ ಮತ್ತು "ಡಿ" ವೃಂದದ ಅಧಿಕಾರಿ / ನೌಕರರ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ಒಳಪಟ್ಟವರಿಗೆ ವಿಶೇಷ ವೈಯಕ್ತಿಕ ವೇತನ ಬಡ್ತಿ ಹಾಗೂ ಗರ್ಭಪಾತ ಮತ್ತು ಹೆರಿಗೆ ರಜೆಯನ್ನು 1958 ರ ಕೆ.ಸಿ.ಎಸ್.ಆರ್. ನಿಯಮಾವಳಿಗಳ ಅಡಿಯಲ್ಲಿ ಪರಿಶೀಲಿಸಿ ಮಂಜೂರಾತಿಗಾಗಿ ಶಿಫಾರಸ್ಸು ಮಾಡುವ ಅಧಿಕಾರ

2. ಅಧಿಕಾರಿ ಮತ್ತು ಸಿಬ್ಬಂದಿಗಳ ಅಧಿಕಾರಗಳು ಮತ್ತು ಕರ್ತವ್ಯಗಳು:

- **ಡಾ॥ ಕೆ.ಇ.ಮಂಜುಳ ಆರೋಗ್ಯಾಧಿಕಾರಿ (ಪಶ್ಚಿಮ) ಕ್ಲಿನಿಕಲ್ :-** ಆರೋಗ್ಯ ವೈದ್ಯಕೀಯ ಇಲಾಖೆಯ ಪಶ್ಚಿಮ ವಲಯದ ಮುಖ್ಯಸ್ಥರಾಗಿರುತ್ತಾರೆ. ಕಾಯ್ದೆಯಲ್ಲಿ ಪ್ರದತ್ತವಾದ ಎಲ್ಲಾ ಅಧಿಕಾರವನ್ನು ಹೊಂದಿರುತ್ತಾರೆ ಹಾಗೂ ಪಶ್ಚಿಮ ವಲಯದ ಎಲ್ಲಾ ರೆಫರಲ್ ಆಸ್ಪತ್ರೆ, ಹೆರಿಗೆ ಆಸ್ಪತ್ರೆಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣದ ಅಧಿಕಾರವನ್ನು ಹೊಂದಿರುತ್ತಾರೆ.
- **ಎನ್.ಅರುಣ್ ಕುಮಾರ್(ಪ್ರ.ದ.ಸ) :-** ಆರೋಗ್ಯಾಧಿಕಾರಿ (ಪಶ್ಚಿಮ) ಕ್ಲಿನಿಕಲ್ ಕಛೇರಿಗೆ ಸಂಬಂಧಿಸಿದ ಟಪಾಲು ಸ್ವೀಕೃತಿ ಹಾಗೂ ಮೇಲಾಧಿಕಾರಿಗಳಿಂದ ಅನುಮತಿ ಪಡೆದು ಪರಿಶೀಲಿಸಿದ ನಂತರ ಸಹಿಯೊಂದಿಗೆ ಸಂಬಂಧಪಟ್ಟ ಕಛೇರಿಗೆ ರವಾನಿಸುವುದು, ಮತ್ತು ಕಛೇರಿಯ ಲೇಖನಾ ಸಾಮಗ್ರಿಗಳು ಇನ್ನಿತರೆ ಸಾದಿಲ್ವಾರು ಬಿಲ್ಲುಗಳನ್ನು ಸಹಿಗಾಗಿ ಸಲ್ಲಿಸುವುದು, ರಿಜಿಸ್ಟರ್‌ಗಳನ್ನು ನಿರ್ವಹಿಸುವುದು ಹಾಗೂ ಆರೋಗ್ಯಾಧಿಕಾರಿ (ಪಶ್ಚಿಮ) ಕ್ಲಿನಿಕಲ್ ಕಛೇರಿಯ ವಲಯ ವ್ಯಾಪ್ತಿಗೆ ಸಂಬಂಧಪಡುವ ಮಾಹಿತಿಹಕ್ಕು ಕಾಯ್ದೆಯ ಮೇರೆಗೆ ಕೋರಲಾಗುವ ಪ್ರಶ್ನೆಗಳಿಗೆ ಉತ್ತರಿಸುವುದು ಹಾಗೂ ಮೇಲಾಧಿಕಾರಿಗಳು ಸೂಚಿಸುವಂತೆ ಕಛೇರಿಯ ಇತರೆ ಕೆಲಸಕಾರ್ಯಗಳನ್ನು ನಿರ್ವಹಿಸುವುದು ಹಾಗೂ ವರದಿಯನ್ನು ಮೇಲಾಧಿಕಾರಿಯವರಿಗೆ ಮಾಹಿತಿಯೊಂದಿಗೆ ಸಲ್ಲಿಸಲಾಗುವುದು.
- **ಶ್ರೀ ಶಿವಣ್ಣ (ದ್ವಿ.ದ.ಸ) :-** ಆರೋಗ್ಯಾಧಿಕಾರಿ (ಪ) ಕ್ಲಿನಿಕಲ್ ರವರ ಕಛೇರಿಗೆ ಬರುವಂತಹ ಟಪಾಲುಗಳನ್ನು ಸ್ಪಷ್ಟವಾಗಿ ಪರಿಶೀಲಿಸಿ ಸ್ವೀಕೃತಿ ಮಾಡುವುದು, ಹಾಗೂ ಪ್ರತಿ ದಿನದ ಸ್ವೀಕೃತಿಯಲ್ಲಿ ಅತಿ ಜರೂರು ಮತ್ತು ಮಾಹಿತಿ ಹಕ್ಕು ಕಾಯ್ದೆಯ ಬಗ್ಗೆ ಕಂಡುಬಂದಲ್ಲಿ ಕಛೇರಿಯ ಮೇಲಾಧಿಕಾರಿಗಳ ಗಮನಕ್ಕೆ ಅತಿ ಜರೂರಾಗಿ ವರದಿ ಸಲ್ಲಿಸುವುದು ಹಾಗೂ ಪ್ರತಿ ದಿನದ ಚಿಕುನ್ ಗುನ್ಯಾ ವಿವರವನ್ನು ಅಧೀಕ್ಷಕರುಗಳಿಂದ ಪಡೆದು ಕ್ರೂಢೀಕರಿಸಿ ಕಛೇರಿಯ ಮೇಲಾಧಿಕಾರಿಗಳ ರುಜುವಿನೊಂದಿಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸುವುದು ಹಾಗೂ ಮೇಲಾಧಿಕಾರಿಗಳು ಸೂಚಿಸುವಂತಹ ಕಛೇರಿಯ ಇನ್ನಿತರೆ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು. **[ಸಂಖ್ಯೆ:ಸಕಂಅ(ಕೆಂನ)ಪಿಆರ್/115/09-10 ದಿನಾಂಕ:31-03-2010ರ ಭಾರತ ಜನಗಣತಿ-2011ರ ಸಂಬಂಧ ತರಬೇತಿಗೆ ಹಾಜರಾಗುವ ಬಗ್ಗೆ 169 ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ ಅಧಿಕಾರಿ ಹಾಗೂ ಸಹಕಂದಾಯ ಅಧಿಕಾರಿ ಕೆಂಪೇಗೌಡನಗರ ಉಪವಿಭಾಗ ರವರು ಪತ್ರದ ಮೂಲಕ ಈ ಕಛೇರಿಗೆ ದಿನಾಂಕ:09-04-2010ರಂದು ಭಾರತ**

ಜನಗಣತಿ–2011ರ ಸಂಬಂಧವಾಗಿ ಮೇಲ್ವಿಚಾರಕರು/ಗಣತಿದಾರರಾಗಿ ನಿಯೋಜಿಸಲಾಗಿರುತ್ತದೆ ಎಂಬುದಾಗಿ ಪತ್ರ ಸಲ್ಲಿಸಿರುತ್ತಾರೆ]

- **ಶ್ರೀ ಎಂ.ಜಿ.ನಾಗೇಶ್ (ಚಾಲಕ) :–** ಆರೋಗ್ಯಾಧಿಕಾರಿ (ಪ) ಕ್ಲಿನಿಕಲ್ ರವರ ಕಛೇರಿಯಲ್ಲಿ ಅಂಬಾಸಿಡರ್ ವಾಹನ ಚಾಲಕರಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಹಾಗೂ ಈ ವಾಹನಕ್ಕೆ ಸಂಬಂಧಿಸಿದಂತೆ ವಹಿಗಳಲ್ಲಿ ಸಂಪೂರ್ಣ ವಾಹನದ ಮಾಹಿತಿಯನ್ನು ನಮೂದಿಸಲಾಗುತ್ತದೆ.
- **ಶ್ರೀಮತಿ ರಂಗಮ್ಮ (ಜವಾನಿ) :–** ಆರೋಗ್ಯಾಧಿಕಾರಿ (ಪ) ಕ್ಲಿನಿಕಲ್ ರವರ ಕಛೇರಿಯನ್ನು ಪ್ರತಿದಿನ ಸ್ವಚ್ಛಗೊಳಿಸುವುದು, ಕಛೇರಿಗೆ ಸಂಬಂಧಪಟ್ಟ ದೂರವಾಣಿ, ಟಪಾಲು, ರವಾನೆ ಕಾರ್ಯಗಳು ಹಾಗೂ ಮೇಲಾಧಿಕಾರಿಗಳು ಸೂಚಿಸುವಂತಹ ಕಛೇರಿಯ ಇನ್ನಿತರೆ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು.
- **ಶ್ರೀ ಎಂ.ಸಿ.ನಾಗೇಶ್ (ಜವಾನ) :–** ಆರೋಗ್ಯಾಧಿಕಾರಿ (ಪ) ಕ್ಲಿನಿಕಲ್ ರವರ ಕಛೇರಿಯನ್ನು ಪ್ರತಿದಿನ ಸ್ವಚ್ಛಗೊಳಿಸುವುದು, ಕಛೇರಿಗೆ ಸಂಬಂಧಪಟ್ಟ ದೂರವಾಣಿ, ಟಪಾಲು, ರವಾನೆ ಕಾರ್ಯಗಳು ಹಾಗೂ ಮೇಲಾಧಿಕಾರಿಗಳು ಸೂಚಿಸುವಂತಹ ಕಛೇರಿಯ ಇನ್ನಿತರೆ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು.

3. ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನಗಳು

ನೌಕರರುಗಳಿಗೆ ಲಭ್ಯವಿರುವ ಸೇವಾ ಸವಲತ್ತುಗಳ ಮಂಜೂರಾತಿ ಬಗ್ಗೆ ಈ ಕಛೇರಿಗೆ ಬರುವಂತಹ ಕಡತಗಳನ್ನು ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ ಅಡಿಯಲ್ಲಿ ಪರಿಶೀಲಿಸಿ ನಿಗಧಿತ ಸಮಯದೊಳಗೆ ಕಡತಗಳನ್ನು ಮೇಲಾಧಿಕಾರಿಗಳ ಅವಗಾಹನೆಗೆ ಹಾಗೂ ಮುಂದಿನ ಆದೇಶಕ್ಕೆ ಮಂಡಿಸುವುದು ಹಾಗೂ ಮೇಲಾಧಿಕಾರಿಗಳ ಆದೇಶದಂತೆ ಮುಂದಿನ ಸೂಕ್ತ ಕ್ರಮ ವಹಿಸುವುದು.

4. ಕಾರ್ಯನಿರ್ವಹಿಸುವಲ್ಲಿ ಅನುಸರಿಸುವ ಮಾನದಂಡಗಳು:

ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963 ಹಾಗೂ ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ ಅಡಿಯಲ್ಲಿ ನಿಗಧಿಪಡಿಸಿರುವ ಮಾನದಂಡಗಳು ಮತ್ತು ಮಾನ್ಯ ಆಯುಕ್ತರು ಕಾಲಕಾಲಕ್ಕೆ ನೀಡುವ ಸೂಚನೆಗಳನ್ನು ಪಾಲಿಸಿ ಕ್ರಮ ವಹಿಸುವುದು.

5. ಅದರ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಅದು ಹೊಂದಿರುವ ಅಥವಾ ದರ ನಿಯಂತ್ರಣದಲ್ಲಿರುವ ಅಥವಾ ಅದರ ಉದ್ಯೋಗಿಗಳು ಬಳಸುವ ನಿಯಮಗಳು ಅನುಸೂಚಿಗಳು, ಕೈಪಿಡಿಗಳು ಮತ್ತು ಧಾಖಲೆಗಳು

1. ಕರ್ನಾಟಕ ಸರ್ಕಾರಿ ಸೇವಾ ನಿಯಮಗಳು (ಕೆ.ಸಿ.ಎಸ್.ಆರ್) 2. ಕರ್ನಾಟಕ ಆರ್ಥಿಕ ಸಂಹಿತೆ (ಕೆ.ಎಫ್.ಸಿ) 3. ಕರ್ನಾಟಕ ಖಜಾನೆ ಸಂಹಿತೆ (ಕೆ.ಟಿ.ಸಿ) 4. ಸಾದಿಲ್ವಾರು ವೆಚ್ಚದ ಕೈಪಿಡಿ (ಎಂ.ಈ.ಸಿ) 5. ಬಜೆಟ್ ಕೈಪಿಡಿ (ಬಿ.ಎಂ) 6. ಮಾಹಿತಿ ಹಕ್ಕು ಅಧಿನಿಯಮ, 2005 (ಆರ್.ಟಿ.ಐ) 7. ಕರ್ನಾಟಕ ರಾಜ್ಯ ಪತ್ರ – ವೈದ್ಯಕೀಯ ವೆಚ್ಚದ (ಧರಪಟ್ಟಿಯ ಪುಸ್ತಕ) 8. ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳು–2008 ರಲ್ಲಿ ನಿಗಧಿಪಡಿಸಿರುವ ಮಾನದಂಡಗಳು ಹಾಗೂ ಮಾನ್ಯ ಆಯುಕ್ತರು ನೀಡುವ ಸೂಚನೆಗಳನ್ನು ಪಾಲಿಸುವುದು.

6. ಇಲಾಖೆ ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳ ವಿವರಪಟ್ಟಿ.

| 'A' Paper Permanent | | 'B' Papers30 years | 'C' Papers 10 years | 'D' Papers 5 years | 'E' Papers 1 year |
|---|---|---|---|---|---|
| 1 | ಮುಖ್ಯವಾದ ಆದೇಶಗಳು ಸುತ್ತೋಲೆಗಳು ಸ್ಟಾಕ್ ಪುಸ್ತಕ | – | ಸಂಖ್ಯೆ:ಬಿ12(1)ಪಿಆರ್/394/2010–11 ದಿನಾಂಕ:05–07–2010ರ ಮಾನ್ಯ ಆಯುಕ್ತರವರ ಅಧಿಕಾರ ಪ್ರತ್ಯಾಯೋಜನೆಯ ಪ್ರಕಾರ ಕರ್ತವ್ಯ ನಿರ್ವಹಿಸಲಾಗಿದೆ–1 ನಂ. (Deligation of powers) | ಪಿ.ಆರ್. ಪುಸ್ತಕಗಳು | ದೂರು ಕಡತಗಳು |
| 2 | | – | – | ಟಪಾಲ್ ಪುಸ್ತಕಗಳು | ಮಾಹಿತಿ ಹಕ್ಕುಕಾಯ್ದೆ ಕಡತಗಳು |
| 3 | | – | – | ಹಾಜರಾತಿ ಪುಸ್ತಕ | |
| 4 | | – | – | ಸಾದಿಲ್ವಾರು ವಹಿ | ಸಾಂದರ್ಭಿಕ ರಜೆ ವಹಿ |
| 5 | | – | – | ಲಾಗ್ ಪುಸ್ತಕ | ರಜಾ ಮಂಜೂರಾತಿ ಕಡತಗಳು |
| 6 | | – | – | ಇಂಡೆಂಟ್ ಪುಸ್ತಕ | |
| 7 | | – | – | – | |
| 8 | | – | – | – | |

5

7. ಅದರ ಕಾರ್ಯಾಂಗ ನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂತಹ ಯಾವುದೇ ವ್ಯವಸ್ಥೆಯ ವಿವರಗಳು

ಯಾವುದು ಇಲ್ಲ

8. ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಅಥವಾ ಇತರೆ ನಿಕಾಯಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳು, ಪರಿಷತ್ತುಗಳ ಸಮಿತಿಗಳ ಮತ್ತು ಇತರೆ ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಅಥವಾ ಅಂತಹ ಸಭೆಗಳ ನಡವಳಿಗಳು ಸಾರ್ವಜನಿಕರಿಗೆ ದೊರೆಯುತ್ತವೆಯೇ ಎಂಬುದರ ವಿವರ ಪಟ್ಟಿ

ಯಾವುದು ಇಲ್ಲ

9. ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ನಿರ್ದೇಶಿಕೆ.

| ಕ್ರ ಸಂ. | ಹೆಸರು ಮತ್ತು ಹುದ್ದೆ | ಕಛೇರಿಯ ವಿಳಾಸ | ದೂರವಾಣಿ |
|---|---|---|---|
| 1 | **ಡಾ॥ ಕೆ.ಇ.ಮಂಜುಳ**<br>**ಆರೋಗ್ಯಾಧಿಕಾರಿ (ಪಶ್ಚಿಮ) ಕ್ಲಿನಿಕಲ್** | ಆರೋಗ್ಯಾಧಿಕಾರಿ (ಪಶ್ಚಿಮ) ಕ್ಲಿನಿಕಲ್<br>ಬೃಹತ್ ಬೆಂಗಳೂರು ಮಹಾನಗರ<br>ಪಾಲಿಕೆ, ದಾಸಪ್ಪ ಹೆರಿಗೆ ಆಸ್ಪತ್ರೆ ಆವರಣ<br>2ನೇ ಮಹಡಿ, ಎಸ್.ಜೆ.ಪಿ.ರಸ್ತೆ,<br>ಬೆಂಗಳೂರು–560002 | 080– 22975656 |
| 2 | **ಶ್ರೀ ಎನ್.ಅರುಣ್‌ಕುಮಾರ್**<br>**ಪ್ರಥಮ ದರ್ಜೆ ಸಹಾಯಕ**<br>ಆರೋಗ್ಯಾಧಿಕಾರಿ (ಪಶ್ಚಿಮ) ಕ್ಲಿನಿಕಲ್<br>ರವರ ಕಛೇರಿಯಲ್ಲಿ ಕಾರ್ಯನಿರ್ವಹಿಸಲಾಗಿದೆ. | | |
| 3 | **ಶ್ರೀ ಶಿವಣ್ಣ (ದ್ವಿತೀಯ ದರ್ಜೆ ಸಹಾಯಕ)**<br>ಆರೋಗ್ಯಾಧಿಕಾರಿ (ಪಶ್ಚಿಮ) ಕ್ಲಿನಿಕಲ್<br>ರವರ ಕಛೇರಿಯಲ್ಲಿ ಕಾರ್ಯನಿರ್ವಹಿಸಲಾಗಿದೆ. | | |
| 4 | **ಶ್ರೀ ಎಂ.ಜಿ.ನಾಗೇಶ್ (ಚಾಲಕ)**<br>ಆರೋಗ್ಯಾಧಿಕಾರಿ (ಪಶ್ಚಿಮ) ಕ್ಲಿನಿಕಲ್<br>ರವರ ಕಛೇರಿಯಲ್ಲಿ ಕಾರ್ಯನಿರ್ವಹಿಸಲಾಗಿದೆ. | | |
| 5 | **ಶ್ರೀಮತಿ ರಂಗಮ್ಮ (ಜವಾನ)**<br>ಆರೋಗ್ಯಾಧಿಕಾರಿ (ಪಶ್ಚಿಮ) ಕ್ಲಿನಿಕಲ್<br>ರವರ ಕಛೇರಿಯಲ್ಲಿ ಕಾರ್ಯನಿರ್ವಹಿಸಲಾಗಿದೆ. | | |
| 6 | **ಶ್ರೀ ಎಂ.ಸಿ.ನಾಗೇಶ್ (ಜವಾನ)**<br>ಆರೋಗ್ಯಾಧಿಕಾರಿ (ಪಶ್ಚಿಮ) ಕ್ಲಿನಿಕಲ್<br>ರವರ ಕಛೇರಿಯಲ್ಲಿ ಕಾರ್ಯನಿರ್ವಹಿಸಲಾಗಿದೆ. | | |

10. ನಿಯಮಾನುಸಾರ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಪಡೆಯುತ್ತಿರುವ ಮಾಸಿಕ ವೇತನದ ವಿವರಗಳು.

| ಕ್ರ ಸಂ | ಹೆಸರು ಮತ್ತು ಹುದ್ದೆ | ವೇತನ ಶ್ರೇಣಿ | ಮೂಲ ವೇತನ |
|---|---|---|---|
| 1 | **ಡಾ॥ ಕೆ.ಇ.ಮಂಜುಳ**<br>**ಆರೋಗ್ಯಾಧಿಕಾರಿ (ಪಶ್ಚಿಮ) ಕ್ಲಿನಿಕಲ್** | 20025–28275 | 30975 |
| 2 | **ಶ್ರೀ ಎನ್.ಅರುಣ್‌ಕುಮಾರ್**<br>**ಪ್ರಥಮ ದರ್ಜೆ ಸಹಾಯಕ**<br>ಆರೋಗ್ಯಾಧಿಕಾರಿ (ಪಶ್ಚಿಮ) ಕ್ಲಿನಿಕಲ್<br>ರವರ ಕಛೇರಿಯಲ್ಲಿ ಕಾರ್ಯನಿರ್ವಹಿಸಲಾಗಿದೆ. | 7275–13350 | 7800 |
| 3 | **ಶ್ರೀ ಶಿವಣ್ಣ** (ದ್ವಿತೀಯ ದರ್ಜೆ ಸಹಾಯಕ)<br>ಆರೋಗ್ಯಾಧಿಕಾರಿ (ಪಶ್ಚಿಮ) ಕ್ಲಿನಿಕಲ್<br>ರವರ ಕಛೇರಿಯಲ್ಲಿ ಕಾರ್ಯನಿರ್ವಹಿಸಲಾಗಿದೆ. | 5800–10500 | 6000 |
| 4 | **ಶ್ರೀ ಎಂ.ಜಿ.ನಾಗೇಶ್ (ಚಾಲಕ)**<br>ಆರೋಗ್ಯಾಧಿಕಾರಿ (ಪಶ್ಚಿಮ) ಕ್ಲಿನಿಕಲ್<br>ರವರ ಕಛೇರಿಯಲ್ಲಿ ಕಾರ್ಯನಿರ್ವಹಿಸಲಾಗಿದೆ. | 6250–12000 | 9750 |
| 5 | **ಶ್ರೀಮತಿ ರಂಗಮ್ಮ (ಜವಾನ)**<br>ಆರೋಗ್ಯಾಧಿಕಾರಿ (ಪಶ್ಚಿಮ) ಕ್ಲಿನಿಕಲ್ | 5200–8200 | 8200 |

| | | | |
|---|---|---|---|
| | ರವರ ಕಛೇರಿಯಲ್ಲಿ ಕಾರ್ಯನಿರ್ವಹಿಸಲಾಗಿದೆ. | | |
| 6 | **ಶ್ರೀ ಎಂ.ಸಿ.ನಾಗೇಶ್ (ಜವಾನ)**<br>ಆರೋಗ್ಯಾಧಿಕಾರಿ (ಪಶ್ಚಿಮ) ಕ್ಲಿನಿಕಲ್<br>ರವರ ಕಛೇರಿಯಲ್ಲಿ ಕಾರ್ಯನಿರ್ವಹಿಸಲಾಗಿದೆ. | 4800–7275 | 4900 |

11. 2009–10 ನೇ ಯಾವ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆಯಡಿಯಲ್ಲಿ ನಿಗದಿ ಪಡಿಸಲಾದ ಅನುದಾನ ವಿವರಗಳು

ಯಾವುದು ಇಲ್ಲ

12. ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನವನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳು

ಯಾವುದು ಇಲ್ಲ

13. ಅದು ನೀಡಿರುವ ರಿಯಾಯ್ತಿಗಳನ್ನು ಅನುಮತಿ ಪತ್ರಗಳನ್ನು ಅಥವಾ ಅಧಿಕಾರಿ ಪತ್ರಗಳನ್ನು ಪಡೆಯುವುದರ ವಿವರಗಳು

ಯಾವುದು ಇಲ್ಲ

14. ಅದರ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸುವ ಮಾಹಿತಿಗೆ ಸಂಬಂಧಿಸಿದ ವಿವರಗಳು

ಯಾವುದು ಇಲ್ಲ

15. ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳು

ಯಾವುದು ಇಲ್ಲ

16. ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರೆ ವಿವರಗಳು

| ಕ್ರ ಸಂ | ಇಲಾಖೆ / ಕಛೇರಿ | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ | ಸಾರ್ವಜನಿಕ ಮಾಹಿತಿ ಅಧಿಕಾರಿ | ಮೇಲ್ಮನವಿ ಪ್ರಾಧಿಕಾರ ಅಧಿಕಾರಿ |
|---|---|---|---|---|
| 1 | ಆರೋಗ್ಯಾಧಿಕಾರಿ (ಪಶ್ಚಿಮ) ಕ್ಲಿನಿಕಲ್ | ಕಛೇರಿ ವ್ಯವಸ್ಥಾಪಕರು | ಆರೋಗ್ಯಾಧಿಕಾರಿ (ಪಶ್ಚಿಮ) ಕ್ಲಿನಿಕಲ್ | ಅಪರ ಆಯುಕ್ತರು (ಪಶ್ಚಿಮ) |

17. ನಿಯಮಿಸಬಹುದಾದಂತಹ ಇತರೆ ಮಾಹಿತಿಯನ್ನು ಪ್ರಕಟಿಸ ತಕ್ಕದ್ದು ಮತ್ತು ಆ ತರುವಾಯ ಪ್ರತಿ ವರ್ಷ ಈ ಪ್ರಕಟಣೆಗಳನ್ನು ಅಂದಿನವರೆಗೆ ಪರಿಷ್ಕರಿಸ ತಕ್ಕದ್ದು

ಕಾಲಕಾಲಕ್ಕೆ ಪರಿಷ್ಕರಿಸಲಾಗುವುದು

ಆರೋಗ್ಯ ವೈದ್ಯಕೀಯ ಇಲಾಖೆಗೆ ಸಂಬಂಧಿಸಿದಂತೆ, ಸಾಮಾನ್ಯ ಮಾಹಿತಿಗಳನ್ನು ಪಾಲಿಕೆಯ ವೆಬ್ ಸೈಟ್‌ನಲ್ಲಿ ಅಳವಡಿಸಲಾಗಿದೆ ಪಾಲಿಕೆ ವೆಬ್ ಸೈಟ್‌ನ ವಿಳಾಸ www.bbmp.gov.in

ಆರೋಗ್ಯಾಧಿಕಾರಿ (ಪಶ್ಚಿಮ) ಕ್ಲಿನಿಕಲ್
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.